ಹಳಗನ್ನಡ ಸಾಹಿತ್ಯದ ರುಚಿ ಮತ್ತು ಅಂದವನ್ನು ಓದುಗರಿಗೆ ಪರಿಚಯಿಸುವ ಮಾಲಿಕೆ 'ನಿಚ್ಚಂ ಪೊಸತು'. ಪಳಗಿದ ಓದುಗರಿಗೆ ಹಳಗನ್ನಡದ ಚೆಲುವನ್ನು ನೆನಪು ಮಾಡಿಕೊಡುವ, ಹೊಸ ಓದುಗರಿಗೆ ಅದರ ರುಚಿಯನ್ನು ತಾಕಿಸುವ ಉದ್ದೇಶದ ಈ ಮಾಲಿಕೆ – ಹಳಗನ್ನಡ ಕಾವ್ಯದ ಆಯ್ದ ಪ್ರಖರ ಪದ್ಯಭಾಗಗಳನ್ನಿಟ್ಟುಕೊಂಡು ಅವುಗಳ ಸ್ವಾರಸ್ಯ, ಭಾಷಾವಿಶೇಷ, ಛಂದಸ್ಸು, ರಸಾಸ್ವಾದದ ಸಾಧ್ಯತೆಗಳ ಚರ್ಚಿಸಲಿದೆ.

ಇವತ್ತಿನ ಭಾರತ ಸಂಕೇತಗಳ ಗೆಲುವಿನ ಭಾರತವಾಗಿದೆ. ಇಲ್ಲಿನ ಮೂಲನಿವಾಸಿಗಳನ್ನೇ 'ನೀವು ಯಾರು? ನೀವು ಇಲ್ಲಿಯವರೆನ್ನುವುದಕ್ಕೆ ಆಧಾರಗಳನ್ನು ಒದಗಿಸಿ' ಎನ್ನುವ ಪರಿಸ್ಥಿತಿಯನ್ನು ಸೃಷ್ಟಿಸುವ, ಏಕತ್ವವನ್ನು ಹೇರುವ, ಮೀಸಲಾತಿ ವಿರೋಧಿ ಹಾಗೂ ಪಾವಿತ್ರ್ಯದ ಭಾರತ ನಮ್ಮ ಕಣ್ಣ ಮುಂದಿದೆ. ಅಂದರೆ ಮಾನವೀಯ ಸಂವೇದನೆ ಅಥವಾ ಜೀವ ಸಂವೇದನೆ ಅನ್ನುವುದು ಭಾರತೀಯ ಸಮಾಜದಿಂದ ದೂರವಾಗುತ್ತಿರುವ 'ದುರಿತ ದಿನಗಳಲ್ಲಿ' ನಾವು ಬದುಕುತ್ತಿದ್ದೇವೆ. 'ಮನುಷ್ಯ ಸಂವೇದನೆ'ಗೆ ಮಸಿ ಹಚ್ಚುಲಾಗುತ್ತಿದೆ, ಇದು ಭಾರತೀಯ ಸಮಾಜದ ಒಂದು ದೊಡ್ಡ ಕೊಳೆ. ಇಂತಹ ಕೊಳೆಯನ್ನು ಕಾಲಕಾಲಕ್ಕೆ ಈ ನೆಲದ ಕವಿಗಳು ಉಜ್ಜುತ್ತಲೇ ಬೆಳಗುತ್ತಲೇ ಬಂದಿದ್ದಾರೆ. ಅಂತವರಲ್ಲಿ ನಮ್ಮ ನುಡಿಯ ಮೊದಲ ಕವಿ ಪಂಪ ಬಹುಮುಖ್ಯನಾದವನು.

ಪಂಪ ಹುಟ್ಟಿದ್ದು ಇಂದಿನ ಧಾರವಾಡ ಜಿಲ್ಲೆಯ ಅಣ್ಣಿಗೇರಿಯಲ್ಲಿ. ಕ್ರಿ.ಶ. 901ರ ದುಂದುಭಿ ಸಂವತ್ಸರದಲ್ಲಿ. ತಂದೆ ಅಭಿರಾಮದೇವ ಅಥವಾ ಭೀಮಪಯ್ಯ. ತಾಯಿ ಅಬ್ಬಲಬ್ಬೆ. ಬ್ರಾಹ್ಮಣ ಧರ್ಮದವನಾಗಿದ್ದ ತಂದೆ ಆನಂತರ ಜೈನಧರ್ಮಕ್ಕೆ ಮತಾಂತರವಾದನೆಂದು ಪಂಪನೇ ಹೇಳಿದ್ದಾನೆ. ತನ್ನನ್ನು ತಾನು ಮೋಹಕ ರೂಪದವನೆಂದೂ, ಹಿತಮಿತ ಮಧುರ ವಚನ, ಲಲಿತ ವೇಷದವನೆಂದೂ ಹೇಳಿಕೊಂಡಿದ್ದಾನೆ. ಪಂಪ ಕವಿ ಅಷ್ಟೇ ಅಲ್ಲ, ಕಲಿ ಕೂಡ ಆಗಿದ್ದ. ಆತನಿಗೆ ಆಶ್ರಯ ಇತ್ತವನು ಚಾಲುಕ್ಯರ ಅರಸನಾಗಿದ್ದ ಅರಿಕೇಸರಿ.

'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಎರಡು ಪಂಪನ ಕಾವ್ಯಗಳು. ಒಂದು 'ಧಾರ್ಮಿಕ ಕಾವ್ಯ'ವಾದರೆ, ಮತ್ತೊಂದು 'ಲೌಕಿಕ ಕಾವ್ಯ'. ಒಂದು ಬದುಕಿನ ಧರ್ಮವನ್ನು, ಅದರ ಸ್ವರೂಪವನ್ನು ಹಾಗೂ ಒಡಹುಟ್ಟಿದವರು ವೈರಿಗಳಾಗುವ, ದಾಯಾದಿ ಕಲಹವನ್ನು ಜೈನ ತೀರ್ಥಂಕರ ಮತ್ತು ಚಕ್ರವರ್ತಿಗಳ ಕತೆಯ ಹಿನ್ನಲೆಯಲ್ಲಿ ವಿವರಿಸುತ್ತದೆ. ಮತ್ತೊಂದು, ಮಹಾಭಾರತದ ಕತೆಯ ಮೂಲಕ ಬದುಕಿನ ಧರ್ಮವನ್ನು, ಯುದ್ಧ, ಹಿಂಸೆ, ದಾಯಾದಿ ವೈರತ್ವದ ಕೊಳೆಯನ್ನು ಬೆಳಗುವ, ಆ ಮೂಲಕ ಬದುಕಿಗೆ ಬೆಳಕನ್ನು ಪಡೆದುಕೊಳ್ಳುವ ಮನುಷ್ಯಜೀವನದ ಸಾಹಸವನ್ನು ಕಟ್ಟಿಕೊಡುತ್ತದೆ.

ಪಂಪನ ಕಾವ್ಯಗಳು ಕನ್ನಡಕ್ಕೆ ಹೊಸ ಕಾವ್ಯಮೀಮಾಂಸೆಯನ್ನು, ಕಾವ್ಯಮಾರ್ಗವನ್ನು ಕಟ್ಟಿಕೊಟ್ಟವು. ಪಂಪ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಕಾವ್ಯದ ಆರಂಭದಲ್ಲಿ ಕನ್ನಡ ಕಾವ್ಯತತ್ವದ ಬಗೆಗೆ ಹೇಳುತ್ತಾ, ಉತ್ತಮ ಕಾವ್ಯ ಎಂದರೆ,

ಮೃದುಪದ ಗತಿಯಿಂ ರಸಭಾ
ವದ ಪೆರ್ಚಿಂ ಪಣ್ಯ ವನಿತೆಯೊಲ್ ಕೃತಿಸೌಂದ
ರ್ಯದ ಚಾತುರ್ಯದ ಕಣಿಯೆನೆ
ವಿದಗ್ಧಬುದಜನಮನ್ ಅಲೆಅಲೆವೇಡಾ